ನಾನು ಪ್ರತಿಭಟಿಸಬೇಕಾಗುತ್ತದೆ. ನಾನು ಪ್ರತಿಭಟನೆ ಮಾಡುತ್ತಿದ್ದೇನೆ. ನಮ್ಮ ನಿರೀಕ್ಷೆಗೆ ತಕ್ಕ ಉತ್ತರ ಬಂದಿಲ್ಲ, ರೈತರ ಸಮಸ್ಯೆಗೆ ಪರಿಹಾರ ಮಾಡಿಲ್ಲ. ಆದುದರಿಂದ, ನಾನು ಈ ಸದನದಿಂದ ಹೊರಗಡೆ ಹೋಗುತ್ತಿದ್ದೇನೆ.

(ಈ ಸಮಯದಲ್ಲಿ ಶ್ರೀ ಡಿ.ಬಿ. ಚಂದ್ರೇಗೌಡರು, ಶ್ರೀ ಬಿ.ಹೆಚ್. ಬನ್ನಿಕೋಡ್ ರವರು, ಶ್ರೀ ಶಿವಾನಂದ ಹೆಚ್. ಕೌಜಲಗಿಯವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಷ್ಟೆಲ್ಲಾ ಹೇಳಿ ಸಮಾಧಾನವಾಗಿಲ್ಲ ಎಂದರೆ ಅರ್ಥವೇನು?

ಉಪಾಧ್ಯಕ್ಷೀಣಿಯವರು : ನಿಮಗೆ ಏನು ಉತ್ತರ ಬೇಕೆಂಬುದನ್ನು ನಾಳೆ ದಿವಸ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳಿಂದ ಸ್ಟೇಟ್‌ಮೆಂಟ್ ಮಾಡಿಸೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷೀಣಿಯವರೇ, ಮಾನ್ಯ ಖರ್ಗೆಯವರು ಏನು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಇದರ ಜೊತೆಗೆ ನಾನು ಬಹಳ ಮುಖ್ಯವಾಗಿ ಹೇಳಿದ್ದು, ಈ ತರಹ ಆದಾಗ ನೀವು ಒಂದು ಷಾಲಿಸಿ ಮಾಡಬೇಕು. ಅವರು ತನಿಖೆ ಮಾಡಿಲ್ಲ. ಬಹಳ ಮುಖ್ಯವಾಗಿ ನಾನು ಹೇಳುತ್ತಿರತಕ್ಕಂಥಾದ್ದು, ನಮ್ಮ ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಹೋಗಿರತಕ್ಕ ಮಂತ್ರಿಗಳು ಯಾರಿದ್ದಾರೆ, ಅವರ ಧೋರಣೆಯನ್ನು ನಾನು ಖಂಡಿಸುತ್ತಿದ್ದೇನೆ. ಅದಕ್ಕೋಸ್ಕರ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. Atleast they should have come here.

(ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷೀಣಿಯವರೆ, ಪ್ರವಾಹಕ್ಕೆ ಒಳಗಾದಂಥ ರೈತರಿಗೆ ಸಾಕಷ್ಟು ಪರಿಹಾರ ಕೊಟ್ಟಿಲ್ಲ. ಪರಿಹಾರ ಕೊಟ್ಟ ರೈತರನ್ನು ಉಳಿಸುವ ಕಳಕಳಿ ಸರ್ಕಾರಕ್ಕೆ ಇಲ್ಲ. ಇವೊತ್ತು ಇಪ್ಪತ್ತೇಳು ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಸರ್ಕಾರದ ಮತ್ತೆ ಆ ಹಣಕ್ಕೆ ಸಾಕಷ್ಟು ಪರಿಹಾರ ಒದಗಿಸಿಕೊಡಬೇಕಾಗಿತ್ತು. ರಸ್ತೆಗಳು ರಿಪೇರಿಯಾಗಬೇಕಾಗಿತ್ತು. ಸತ್ತವರಿಗೆ ಕನಿಷ್ಟ ೨೫,೦೦೦ ರೂಪಾಯಿಗಳನ್ನು ಪರಿಹಾರ ಕೊಡಬೇಕಾಗಿತ್ತು. ರೈತರ ಹೊಲ ಗದ್ದೆಗಳು ಹಾಳಾಗಿದೆ. ಅವರಿಗೆ ಸರಿಯಾದ ನ್ಯಾಯವಾಗಿ ಒದಗಿಸಿಕೊಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ. ಆದುದರಿಂದ, ಈ ಸರ್ಕಾರದ ವೈಫಲ್ಯತೆಯನ್ನು ಪ್ರತಿಭಟನೆ ಮಾಡಿ, ಕೊಟ್ಟಿರತಕ್ಕಂಥ ಪರಿಹಾರ ಏನೇನೂ ಸಾಲದು ಎಂದು ಹೇಳುತ್ತಾ ನಾನು ಸದನದಿಂದ ವಾಕ್‌ಔಟ್ ಮಾಡುತ್ತಿದ್ದೇನೆ.

(ಶ್ರೀ ಬಿ.ಎಸ್. ಯಡಿಯೂರಪ್ಪ ಮತ್ತು ಶ್ರೀ ಕೆ.ಎಸ್. ಈಶ್ವರಪ್ಪನವರು ಸಭಾತ್ಯಾಗ ಮಾಡಿದರು)

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಸನ್ಮಾನ್ಯ ಉಪಾಧ್ಯಕ್ಷೀಣಿಯವರೇ, ಒಂದು ಕ್ಲಾರಿಫಿಕೇಷನ್ ಕೇಳಬೇಕಾಗಿದೆ. ಬಾದಾಮಿ ತಾಲ್ಲೂಕಿನ ಕೆರೆ ಸಮಸ್ಯೆ ಇನ್ನು ಜೀವಂತವಾಗಿದೆ. ನಾನು ಈಗಲೂ ಪರಿಹಾರ ಕೇಳುತ್ತಿದ್ದೇನೆ. ಇದೇ ವರ್ಷದಲ್ಲಿ ಸುಮಾರು 120 ಕುಟುಂಬಗಳ ಭೂಮಿ ಸಂಪೂರ್ಣವಾಗಿ ಮುಳುಗಡೆಯಾಗಿದೆ. ಇದು ಹೊಸ ಕೆರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ನಾಲ್ಕು ವರ್ಷಗಳ ಹಿಂದೆ ಕಟ್ಟಿದ ಕೆರೆ. ನಾವು ಇವೊತ್ತು ಡಿ.ಸಿ.ಯವರಿಗೆ ಫೋನ್ ಮಾಡಿ ವರದಿ ತರಿಸಿದ್ದೇನೆ. ಬೇಕಾದರೆ ನೋಡಿ.